<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ. ಸಂಖ್ಯೆ **1192/2024**</u>

<u>ಪಿರ್ಯಾದಿ</u> : ಮೆಃ ಕರಿಬಸವೇಶ್ವರ ಫೈನಾನ್ಸ್,
ಪ್ರೊಪ್ರೈಟರ್ ಅಂಡ್ ಅಥೋರೈಸ್ಡ್ ಸಿಗ್ನೇಟರಿ,
ಶ್ರೀಮತಿ ಚೈತ್ರ ಎನ್.,
ವಯಸ್ಸುಃ 39 ವರ್ಷ,
ಬಿನ್ ದಿಃ ನಾರಾಯಣಪ್ಪ ಎಂ.,
ವಾಸಃ ಶಿವಾಜಿನಗರ, ಬಿಳಗುಳ ಗ್ರಾಮ,
ಹೆಸ್ಗಲ್ ಅಂಚೆ, ಕಸಬಾ ಹೋಬಳಿ,
ಮೂಡಿಗೆರೆ ತಾಲ್ಲೂಕು.
ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

<u>ಆರೋಪಿ</u> : **ರಿಚರ್ಡ್, ವಯಸ್ಸು 42 ವರ್ಷ,**
**ಬಿನ್ ದಿಃ ಪ್ಯಾಟ್ರಿಕ್ ಕ್ಯಾಸ್ಟಾ,**
**ಕೆಲಸಃ ಇಂಜಿನೀಯರಿಂಗ್ ವರ್ಕ್ಸ್,**
**ವಾಸಃ ಮಸೀದಿ ಹಿಂಭಾಗ, ಬಿಳಗುಳ,**
**ಹೆಸ್ಗಲ್ ಗ್ರಾಮ ಮತ್ತು ಅಂಚೆ,**
**ಮೂಡಿಗೆರೆ ತಾಲ್ಲೂಕು.**
**ಚಿಕ್ಕಮಗಳೂರು ಜಿಲ್ಲೆ.**

<u>ಆಪಾದನೆಯ ಸಾರಾಂಶ</u>

ಶ್ರೀ ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಆರೋಪಿಯಾದ ನೀವು ನಿಮ್ಮ ತುರ್ತು ಹಣದ ಅವಶ್ಯಕತೆಯ ಸಲುವಾಗಿ ಪಿರ್ಯಾದಿಯ ಫೈನಾನ್ಸ್‌ನಿಂದ 8,00,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಅದರಂತೆ ಆರೋಪಿಯಾದ ನೀವು ಒಟ್ಟು ರೂ 1,99,350/- ಗಳನ್ನು ಫೋನ್ ಪೇ ಮುಖಾಂತರ ಪಿರ್ಯಾದುದಾರರಿಗೆ ಸಂದಾಯ ಮಾಡಿ, ರೂ.7,90,650/- ಗಳನ್ನು ಬಾಕಿ ಉಳಿಸಿಕೊಂಡಿರುತ್ತೀರಿ. ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಬ್ಯಾಂಕ್ ಆಫ್ ಬರೋಡಾ, ಬಿಳಗುಳ ಶಾಖೆಯ ಚೆಕ್ ಸಂಖ್ಯೆ 003832, ದಿನಾಂಕ 25.04.2024, ರೂ.4,95,000/- ಹಾಗೂ ಮತ್ತೊಂದು ಚೆಕ್ ಸಂಖ್ಯೆ 003833, ದಿನಾಂಕ 25.04.2024, ರೂ.4,95,000/- (ಒಟ್ಟು ರೂ 9,99,000/-) ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಗಳನ್ನು ಫಿರ್ಯಾದಿಯು ಹೆಚ್.ಡಿ.ಎಫ್.ಸಿ ಬ್ಯಾಂಕ್, ಮೂಡಿಗೆರೆ

ಶಾಖೆಗೆ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds Insufficient) ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 03.06.2024 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

*(ದಿನಾಂಕ 13.01.2025 ರಂದು ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)*

**Sd/-**

ಮೂಡಿಗೆರೆ
ದಿನಾಂಕಃ 13.01.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.